ಕರ್ನಾಟಕ ಸರ್ಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ಕ್ಷೇತ್ರ ಶಿಕ್ಷಣಾಧಿಕಾರಿಯವರ ಕಚೇರಿ
ಪುತ್ತೂರು ತಾಲೂಕು, ದಕ್ಷಿಣ ಕನ್ನಡ
ದಿನಾಂಕ:17.02.2020

ಸಂ/ಎ5/ಅನು.ರಹಿತ/ಮಾ.ನ/2019–2020

## ನಮೂನೆ–3

ಕರ್ನಾಟಕ ಶಿಕ್ಷಣ ಕಾಯಿದೆ (1999– ರ ಮಾನ್ಯತೆ ನಿಯಮ 4– ರಂತೆ)

ನಟ್ಬೋಜ ಫೌಂಡೇಷನ್ ಟ್ರಸ್ಟ್ (ರಿ) , ಬಪ್ಪಳಿಗೆ , ಪುತ್ತೂರು ತಾಲೂಕು ಈ ಆಡಳಿತ ಮಂಡಳಿಯ ಅಂಬಿಕಾ ಬಾಲ ವಿದ್ಯಾಲಯ , ಬಪ್ಪಳಿಗೆ, ಪುತ್ತೂರು ತಾಲೂಕು , ದ.ಕ ಈ ಶಾಲೆಗೆ ಕರ್ನಾಟಕ ಶಿಕ್ಷಣ ಕಾಯಿದೆ 1983(ಕರ್ನಾಟಕ ಆಕ್ಟ್ –1–1995) ಸೆಕ್ಷನ್ 38 ರಂತೆ ಈ ದಿನ ಅಂದರೆ ದಿನಾಂಕ : 04.02.2020 ರಂದು ಈ ಕೆಳಗೆ ನಮೂದಿಸಿರುವಂತೆ ಮಾನ್ಯತೆ ನೀಡಿದೆ ಎಂದು ಪ್ರಮಾಣೀಕರಿಸಲಾಗಿದೆ.

1. ನೋಂದಣಿ ಸಂಖ್ಯೆ : 05/2019–2020
2. ಶಾಲೆಯ ವಿಳಾಸ : ಅಂಬಿಕಾ ಬಾಲ ವಿದ್ಯಾಲಯ , ಬಪ್ಪಳಿಗೆ, ಪುತ್ತೂರು ತಾಲೂಕು , ದ.ಕ
3. ಈಗಾಗಲೇ ನೀಡಿರುವ ಪ್ರಾವಿಷನಲ್ ಪ್ರಮಾಣ ಪತ್ರದ ನೋಂದಣಿ ಸಂಖ್ಯೆ ; ಅನ್ವಯಿಸುವುದಿಲ್ಲ.
4. ಮಾನ್ಯತೆ ನೀಡಿರುವ ಮಾಧ್ಯಮ ; 1 ರಿಂದ 6 ಆಂಗ್ಲ ಮಾಧ್ಯಮ ,
5. ಶಾಲೆ ಅನುದಾನ ಸಹಿತವೇ/ರಹಿತವೇ? ; ಅನುದಾನರಹಿತ
6. ಮಾನ್ಯತೆ ನೀಡಿರುವ ತರಗತಿಗಳು ; 1 ರಿಂದ 5 ನೇ ತರಗತಿ ಮಾನ್ಯತೆ ನವೀಕರಣ , 6 ನೇ ಪ್ರಥಮ ಮಾನ್ಯತೆ (ಶಾಶ್ವತಅನುದಾನರಹಿತ)

ಮಾನ್ಯತೆ ನೀಡಿರುವ ವರ್ಷ ; 2019–2020

–; ಈ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತುಗೊಳಪಟ್ಟು ಮಾನ್ಯತೆ ನೀಡಿದೆ :–

1. ಕರ್ನಾಟಕ ಶಿಕ್ಷಣ ಮಸೂದೆ 1983 (ಕರ್ನಾಟಕ ಮಸೂದೆ ನಂ 1 ರ 1995 ) ರೀತ್ಯಾ ಶಾಲೆಯು ಇಲಾಖೆಯಲ್ಲಿ ನೋಂದಣಿಯಾಗಿರತಕ್ಕದ್ದು.
2. ಕರ್ನಾಟಕ ಶಿಕ್ಷಣ ಸಂಸ್ಥೆಗಳ ( ಪ್ರಾಥಮಿಕ ಮತ್ತು ಪ್ರೌಢ ಶಾಲಾ ಮಾನ್ಯತೆ ) ನಿಯಮ 1999 ಉಪನಿಯಮ 4 ರಲ್ಲಿ ವಿಧಿಸಿದ ಷರತ್ತುಗಳನ್ನು ಪೂರೈಸತಕ್ಕದ್ದು.
3. ತರಬೇತಾದ ಶಿಕ್ಷಕರನ್ನು ಮಾತ್ರ ನೇಮಿಸಿಕೊಳ್ಳತಕ್ಕದ್ದು.
4. ಶಿಕ್ಷಕರುಗಳ ನೇಮಕಾತಿಯು ತರಗತಿ ; ವಿದ್ಯಾರ್ಥಿಗಳ ಅನುಪಾತ 1;40 ರಂತೆ ಇರಬೇಕು.
5. ಶಾಲೆ ನಡೆಸಲು ಅಗತ್ಯವಾದ ಸ್ಥಳಾವಕಾಶ , ಪಿಠೋಪಕರಣ , ಪಾಠೋಪಕರಣ ಹಾಗೂ ಆಟದ ಮೈದಾನ ಒದಗಿಸಬೇಕು.
6. ಸರಕಾರ ನಿಗದಿಪಡಿಸಿದ ಶುಲ್ಕಗಳನ್ನು ಮಾತ್ರ ವಿದ್ಯಾರ್ಥಿಗಳಿಂದ ವಸೂಲು ಮಾಡತಕ್ಕದ್ದು. ಮತ್ತು ಇದರ ಲೆಕ್ಕ ಪತ್ರಗಳನ್ನು ನಿರ್ವಹಿಸಿ ಶಾಲೆಯ ಹೆಸರಿನಲ್ಲಿಟ್ಟು ಶಾಲಾ ತನಿಖಾ ಸಮಯದಲ್ಲಿ ಹಾಜರುಪಡಿಸಬೇಕು.
7. ಹಿಂದಿನ ಸಾಲಿನವರೆಗಿನ ಲೆಕ್ಕ ಪತ್ರಗಳನ್ನು ನೊಂದಣಾಧಿಕಾರಿಗಳಿಗೆ ಸಲ್ಲಿಸಿ ಸ್ವೀಕೃತಿ ಪಡೆದು ಪ್ರತಿಯನ್ನು ಸಲ್ಲಿಸಬೇಕು.
8. ಅವಧಿ ಮುಗಿದಿರುವ ಸ್ಥಿರ ನಿಧಿಯನ್ನು ನವೀಕರಿಸಕೊಳ್ಳಬೇಕು.
9. ಸರಕಾರ ನಿಗದಿಪಡಿಸಿದ ಪಠ್ಯಕ್ರಮಗಳನ್ನು ಮಾತ್ರ ಶಾಲೆಯಲ್ಲಿ ಅಳವಡಿಸತಕ್ಕದ್ದು.
10. ಸ್ಥಿರ ನಿಧಿಯನ್ನು ನಿಯಮಾನುಸಾರ ಜಂಟಿ ಖಾತೆಯಲ್ಲಿ ಇಟ್ಟಿರತಕ್ಕದ್ದು.
11. ನಿಯಮಾನುಸಾರ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಆಡಿಟ್ ವರದಿಯನ್ನು ಸಲ್ಲಿಸಿ ಅನುಮೋದನೆ ಪಡೆಯತಕ್ಕದ್ದು.
12. ಕರ್ನಾಟಕ ಶಿಕ್ಷಣ ಕಾಯಿದೆ ನಿಯಮದಲ್ಲಿ ವಿಧಿಸಿರುವ ಎಲ್ಲಾ ಮಾನ್ಯತೆ ನಿಯಮಗಳನ್ನು ಪಾಲಿಸತಕ್ಕದ್ದು. ತಪ್ಪಿದ್ದಲ್ಲಿ ನಿಯಮಾನುಸಾರ ಮಾನ್ಯತೆಯನ್ನು ಹಿಂತೆಗೆದುಕೊಳ್ಳಲಾಗುವುದು.
13 ಶಾಲೆಯಲ್ಲಿನ ಎಲ್ಲಾ ಶಿಕ್ಷಕರ ಮತ್ತು ಸಿಬ್ಬಂದಿ ವರ್ಗದವರ ಸೇವಾ ಪುಸ್ತಕಗಳನ್ನು ಪರಿಶೀಲನೆಗೆ ಒಪ್ಪಿಸುವುದು.
14 ಪ್ರತಿ ತರಗತಿ ಕೊಠಡಿಗಳಲ್ಲಿ ಕಡ್ಡಾಯವಾಗಿ ಬೆಂಕಿ ನಂದಕವನ್ನು ಅಳವಡಿಸುವುದು.
15. ಇಲಾಖೆಗೆ ಅಗತ್ಯವಾದ ಅಂಕಿ ಅಂಶಗಳನ್ನು ಸಕಾಲದಲ್ಲಿ ನೀಡುವುದು.

Scanned with CamScanner

16. ಮಕ್ಕಳ ರಕ್ಷಣಾ ನೀತಿ 2016 ನ್ನು ಕಡ್ಡಾಯವಾಗಿ ಪಾಲಿಸುವುದು.
17. ಮಕ್ಕಳ ಸುರಕ್ಷಾ ಸಮಿತಿ ಬಗ್ಗೆ ವರದಿ ನೀಡತಕ್ಕದ್ದು.
18. ರ್‍ಯಾಂಪ್ ಅಳವಡಿಸಿದ ಬಗ್ಗೆ ಭಾವಚಿತ್ರ ಹಾಗೂ ವರದಿ ನೀಡತಕ್ಕದ್ದು
19. ಶಾಲಾ ವಾಹನ ನಿರ್ವಹಣೆ ಬಗ್ಗೆ ಭಾವಚಿತ್ರ ಹಾಗೂ ವರದಿ ನೀಡತಕ್ಕದ್ದು
20. ಶುಲ್ಕ ವಸೂಲಾತಿ ವಿವರಗಳ ಬಗ್ಗೆ ಫ್ಲೆಕ್ಸ್ ಅಳವಡಿಸತಕ್ಕದ್ದು.
21. ಶಾಲೆಯಲ್ಲಿ ಮಕ್ಕಳ ಸುರಕ್ಷತೆಗಾಗಿ ಪ್ರತಿ ತರಗತಿ ಕೊಠಡಿಗಳಲ್ಲಿ ಸಿಸಿಟಿವಿ ಅಳವಡಿಕೊಳ್ಳುವುದು.
22. ಶಾಲಾ ಆವರಣದಿಂದ 100 ಅಡಿ ಅಂತರದಲ್ಲಿ ತಂಬಾಕುಯುಕ್ತ ವಸ್ತುಗಳ ಮಾರಾಟ ನಿಷೇದಿಸಿದೆ ಎಂದು ಶಾಲಾ ಆವರಣದಲ್ಲಿ ಫಲಕವನ್ನು ಅಳವಡಿಸುವುದು.
23. ಪ್ರತಿ ವರ್ಷವು ವಿದ್ಯಾರ್ಥಿಗಳ ವೈದ್ಯಕೀಯ ಪರೀಕ್ಷೆಯನ್ನು ನಿಯಮಾನುಸಾರ ಮಾಡಿಸತಕ್ಕದ್ದು.
24 ಸರಕಾರಿ ಅದಿಸೂಚನೆ ದಿನಾಂಕ 12.01.2006 ರಲ್ಲಿ ತಿಳಿಸಿರುವಂತೆ ನೌಕರರಿಗೆ ಸೇವಾಭದ್ರತೆ ನೀಡುವ ಷರತ್ತಿಗೊಳ್ಳಪಟ್ಟಿರುತ್ತದೆ.
25. ಇಲಾಖೆಯಿಂದ ಯಾವುದೇ ಅನುದಾನದ ನೆರವು ನೀಡುವುದಿಲ್ಲ.
26. ಕರ್ನಾಟಕ ಶಿಕ್ಷಣ ಅಧಿನಿಯಮ 1983 ರ ಅಧ್ಯಾಯ 7 ರಲ್ಲಿ ನಿಗದಿಪಡಿಸಿದಂತೆ ಆಡಳಿತ ಮಂಡಳಿ ಮತ್ತು ವ್ಯವಸ್ಥಾಪಕ ಸಮಿತಿಯನ್ನು ರಚಿಸಿರಬೇಕು, ಪ್ರತಿ ಎರಡು ವರ್ಷಗಳಿಗೊಮ್ಮೆ ವ್ಯವಸ್ಥಾಪಕ ಸಮಿತಿಯನ್ನು ಪುನಾರಚಿಸಿ ಇಲಾಖೆಯಿಂದ ಅನಮೋದನೆ ಪಡೆದುಕೊಳ್ಳುವುದು.
27. ಈ ಆದೇಶವು ನೋಂದಣಿ ಆದೇಶದಲ್ಲಿ ವಿಧಿಸಿರುವ ಷರತ್ತುಗಳಿಗೊಳ್ಳಪಟ್ಟಿರುತ್ತದೆ.
28. ಸರಕಾರದ ಅಧಿಸೂಚನೆ ಸಂ : ಇಡಿ/709/ಪಿಜಿಸಿ/2017 ಬೆಂಗಳೂರು ದಿ 07.03.2018 ರಂತೆ ಮಾನ್ಯತೆ ಮತ್ತು ಸಂಸ್ಕರಣಾ ಶುಲ್ಕವನ್ನು ಸರಕಾರದ ಲೆಕ್ಕ ಶೀರ್ಷಿಕೆಗೆ ಪಾವತಿಸಿ ಚಲನ್ ಪ್ರತಿಯನ್ನು ಈ ಕಚೇರಿಗೆ ಸಲ್ಲಿಸಿರುತ್ತಾರೆ.

ಕ್ಷೇತ್ರ ಶಿಕ್ಷಣಾಧಿಕಾರಿಗಳು
ಸಾರ್ವಜನಿಕ ಶಿಕ್ಷಣ ಇಲಾಖೆ
ಪುತ್ತೂರು ತಾಲೂಕು
ಪುತ್ತೂರು. ದ.ಕ.

ಗೆ,

ಸಂಚಾಲಕರು , ಅಂಬಿಕಾ ಬಾಲ ವಿದ್ಯಾಲಯ , ಬಪ್ಪಳಿಗೆ , ಪುತ್ತೂರು ತಾಲೂಕು

Scanned with CamScanner